ದಿನಾಂಕ: 09.12.2025 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ವಾದಿಗಳ ಪರ ಶ್ರೀ ಬಿ ಜಿ ಆರ್ ವಕೀಲರಿಂದಃ**

ನಿಡಿ-85 ನ್ನು ದಾವೆ ಸಲ್ಲಿಸಿದ 10 ವರ್ಷದ ನಂತರ ನೋಟರೈಸ್ಡ್ ಮಾಡಿ ಸಲ್ಲಿಸಿದ್ದೇನೆ ಎಂದರೆ ನಿಜ. ವಂಶವೃಕ್ಷವನ್ನು ತಹಶೀಲ್ದಾರರಿಂದ ಪಡೆದು ಹಾಜರು ಪಡಿಸಲು ನನಗೆ ತೊಂದರೆ ಇಲ್ಲ. ನಿಡಿ -85 ನ್ನು ಸಲ್ಲಿಸುವ ಪೂರ್ವದಲ್ಲಿ ಈ ದಾವೆಯಲ್ಲಿ ನನ್ನ ತಂದೆ ಮತ್ತು ನನ್ನ ದೊಡ್ಡಪ್ಪ ಸಲ್ಲಿಸಿದ ಪ್ರತಿವಾದ ಪತ್ರದ ಬಗ್ಗೆ ತಿಳಿದುಕೊಂಡಿದ್ದೇನೆ. ನಿಡಿ-85 ವಂಶವೃಕ್ಷವನ್ನು ನನ್ನ ತಂದೆ ಮತ್ತು ನನ್ನ ದೊಡ್ಡಪ್ಪ ಚಿಕ್ಕೇಗೌಡ ರವರನ್ನು ವಿಚಾರಿಸಿ ಬರೆಸಿದ್ದೇವೆ. ಪ್ರತಿವಾದ ಪತ್ರದ 4 ನೇ ಪುಟದಲ್ಲಿ ನಿಮ್ಮ ತಂದೆ ಮತ್ತು ದೊಡ್ಡಪ್ಪ ಪಟೇಲ್ ಚಿಕ್ಕೇಗೌಡ ಇವರಿಗೆ ಇಬ್ಬರು ಮಕ್ಕಳು ಇದ್ದು ಅವರು ಸಣ್ಣಜ್ಜ ಯಾನೆ ಸಣ್ಣೇಗೌಡ ಮತ್ತು ಚಿಕ್ಕೇಗೌಡ ಆಗಿದ್ದು ಸಣ್ಣಜ್ಜ ಯಾನೆ ಸಣ್ಣೇಗೌಡರಿಗೆ 4 ಜನ ಹೆಣ್ಣು ಮಕ್ಕಳು ಇಬ್ಬರು ಗಂಡು ಮಕ್ಕಳು ಅವುರುಗಳು ಚಿಕ್ಕಮ್ಮ , ಸಣ್ಣೇ ಪಾತೇಗೌಡ ಯಾನೇ ಓದೋ ಪಾತೇ ಗೌಡ , ಪಾತಮ್ಮ , ಚಿಕ್ಕಮ್ಮ, ನಿಂಗಮ್ಮ ಮತ್ತು ಚಿಕ್ಕಣ್ಣ ಯಾನೇ ಚಿಕ್ಕೇಗೌಡ ಎಂದು ನಮೂದು ಮಾಡಿರುತ್ತಾರೆ ಎಂದರೆ ಸಾಕ್ಷಿ ಅವರಿಗೂ ನಮಗೂ ಸಂಬಂಧವಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದ ಪತ್ರದ ಅಂಶವು ಸರಿಯಾಗಿರುತ್ತದೆ ಆದರೆ ಅದರಲ್ಲಿ ಬರೆದ ವಂಶವೃಕ್ಷ ಸರಿಯಾಗಿರುವುದಿಲ್ಲ .

ಸಣ್ಣಪಾತೇಗೌಡನ ಮಗ ಪಾತೇಗೌಡ ಎಂದರೆ ಸರಿಯಲ್ಲ. ಸಾಕ್ಷಿ ಸಣ್ಣ ಪಾತೇಗೌಡನ ಮಗ ದೊಡ್ಡ ಪಾತೇಗೌಡ ಎಂದು ನುಡಿಯುತ್ತಾರೆ. ಸಣ್ಣಪಾತೇಗೌಡ ಮತ್ತು ಚಿಕ್ಕಣ್ಣ ಯಾನೇ ಚಿಕ್ಕೇಗೌಡ ಇವರು ಸಣ್ಣೇಗೌಡನ ಮಕ್ಕಳು ಎಂದರೆ ಸರಿಯಲ್ಲ. ಸಣ್ಣ ಪಾತೇಗೌಡ ಯಾರ ಮಗ ಎಂದು ನನಗೆ ಗೊತ್ತಿಲ್ಲ. ಚಿಕ್ಕಣ್ಣ ಯಾನೇ ಚಿಕ್ಕೇಗೌಡ ಇವರ ಜನನ ತಂದೆ ಹೆಸರು ನನಗೆ ಗೊತ್ತಿಲ್ಲ. ನನಗೆ ಸರಿಯಾಗಿ ಕನ್ನಡ ಓದಲು ಬರುವುದಿಲ್ಲ. ವಂಶವೃಕ್ಷ ನಾನೇ ಹೇಳಿ ಬರೆಸಿರುತ್ತೇನೆ. ಅದು ಕನ್ನಡದಲ್ಲಿ ಇದೆ. ನಿಡಿ-85 ರಲ್ಲಿರುವ ನಮೂದಿಸಿದ ಚಿದಂಬರಮ್ ಎನ್ನುವ ಸಹಿ ನನ್ನದಾಗಿರುತ್ತದೆ. ನೋಟರಿಯವರು ಅದನ್ನು ಓದಿ ಹೇಳಿ ನನ್ನ ಸಹಿ ಪಡೆದುಕೊಂಡಿರುತ್ತಾರೆ

ಎಂದರೆ ನಿಜ. ನಿಡಿ-85 ರ ವಂಶವೃಕ್ಷದಲ್ಲಿ ಸಣ್ಣ ಪಾತೇಗೌಡನ ಮಗ ಚಿಕ್ಕಣ್ಣ ಎಂದು ನಮೂದಾಗಿದೆ ಎಂದರೆ ನಿಜ. ಸಾಕ್ಷಿ ಮುಂದುವರೆದು ಚಿಕ್ಕಣ್ಣ ಎಂದರೆ ಚಿಕ್ಕಣ್ಣ ಯಾನೆ ಚಿಕ್ಕೇಗೌಡ ದತ್ತು ಮಗ ಎಂದು ನುಡಿಯುತ್ತಾರೆ. ಚಿಕ್ಕೆಗೌಡ ಮತ್ತು ಅವರ ಹೆಂಡತಿ ಗಿರಿಯಮ್ಮನಿಗೆ ಮಕ್ಕಳು ಇಲ್ಲ ಎಂದರೆ ನಿಜ. ಚಿಕ್ಕೇಗೌಡ ಮತ್ತು ಗಿರಿಯಮ್ಮನವರು ಗಿರಿಯಮ್ಮನವರ ಗಂಡನ ಅಣ್ಣನ ಮಗನಾದ ಚಿಕ್ಕಣ್ಣನನ್ನು ದತ್ತು ಪಡೆದುಕೊಂಡಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿ ಚಿಕ್ಕೇಗೌಡರು ತೆಗೆದುಕೊಂಡಿಲ್ಲ ಗಿರಿಯಮ್ಮನವರು ದತ್ತು ಪಡೆದುಕೊಂಡಿರುತ್ತಾರೆ ಆದರೆ ಅವರು ಚಿಕ್ಕೇಗೌಡನ ಅಣ್ಣನ ಮಗ ಹೌದೋ ಅಲ್ಲವೋ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನನ್ನ ತಂದೆ ಮತ್ತು ನನ್ನ ದೊಡ್ಡಪ್ಪನವರಿಗೆ ಎಲ್ಲಾ ವಿಚಾರ ಗೊತ್ತು ಎಂದರೆ ಸಾಕ್ಷಿ ಅವರ ಪೂರ್ವಜರ 4 ತಲೆಮಾರಿನ ಹಿಂದಿ ವಿಚಾರ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ನಾನು 4 ತಲೆಮಾರಿಗೆ ಸಂಬಂಧಪಟ್ಟ ವಂಶವೃಕ್ಷ ಬರೆಸಿಲ್ಲ ಎಂದರೆ ನಿಜ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು